



ಮಹಾತ್ಮನ ಆಪ್ತವಲಯದಲ್ಲಿದ್ದ ಧೀರೇನ್‌ರ ಕಲಾಕೃತಿ: 1933ರ ಮೇ 29ರಂದು 'ಹರಿಜನ ಬಾಲಕ'ನಿಂದ ಕಿತ್ತಳೆ ಸ್ವೀಕರಿಸುವ ಮೂಲಕ ಉಪವಾಸ ಅಂತ್ಯಗೊಳಿಸುತ್ತಿರುವ ಮಹಾತ್ಮ. ಎರಡನೆಯದು, ಆರ್. ಎಸ್. ನಾಯ್ಡುರವರ ರೇಖಾಚಿತ್ರ – ಗಾಂಧಿಯವರೊಂದಿಗೆ ಹೆಜ್ಜೆ ಹಾಕುತ್ತಿರುವ ವೆರಿಯರ್ ಎಲ್ವಿನ್

## 4

ಉರಿಯುವ ವಸಾಹತುಶಾಹಿ ಬೆಂಕಿಯ ನಡುವೆ ತಣ್ಣಗೆ ಹುಟ್ಟಿದ ಅಪೂರ್ವ ಸ್ವದೇಶಿ ಚಿಂತನೆಯ ಚಳವಳಿಗಳ ಕಾಲ ಅದು. ಈ ನಡುವೆ ಗಾಂಧಿಯವರಿಗೆ, ದೃಶ್ಯಕಲೆಯ ರವೀಂದ್ರನಾಥ ಟ್ಯಾಗೋರ್, ನಂದಲಾಲ್ ಬೋಸ್, ಆನಂದ ಕುಮಾರಸ್ವಾಮಿ ಅವರುಗಳ ಸಂಪರ್ಕ ಏರ್ಪಟ್ಟು, ಪರಸ್ಪರ ಭೇಟಿಗಳು ನಡೆದವು. ದೃಶ್ಯಕಲೆ–ಸಂಸ್ಕೃತಿಗಳನ್ನು ಬೆಳೆಸುವ ಉದ್ದೇಶದಿಂದ ಕಲಾವಿದರನ್ನು ಪ್ರೋತ್ಸಾಹಿಸುವ ಪ್ರವೃತ್ತಿಯೂ ಗಾಂಧಿಯವರಿಗೆ ಇತ್ತು.

1935ರಲ್ಲಿ ನಂದಲಾಲರಿಗೆ ಗಾಂಧಿ ಸಂಪರ್ಕ. ಕಾಂಗ್ರೆಸ್ ಅಧಿವೇಶನಗಳಿಗೆ ನಂದಲಾಲರ ಕಲಾತ್ಮಕ ನೆರವನ್ನು ಗಾಂಧಿಯವರು ಕೋರಿದರು. ಲಖನೌ, ಇಂದೋರ್, ಫೈಜಪೂರ್ ಮತ್ತು ಅಂತಿಮವಾಗಿ ಗುಜರಾತ್‌ನ ಹರಿಪುರದ ಅಧಿವೇಶನಗಳಲ್ಲಿ ಕಲೆ ಮತ್ತು ಕರಕುಶಲ ಕಲೆಗಳ ಪ್ರದರ್ಶನದ ಅಂಕಣಗಳು ಇದ್ದವು. ನಂದಲಾಲ್ ಬೋಸ್ ಅವರು ಹಲವಾರು ಫಲಕಗಳನ್ನು ಚಿತ್ರಿಸಿದ್ದರು. ಗ್ರಾಮೀಣ ಭಾರತದ ಜನರ ಹಲವು ಮುಖಗಳ ಚಿತ್ರಣ ಅದು. ಹರಿಪುರದ ಭಿತ್ತಿಪತ್ರಗಳಲ್ಲಿ ಬೇಟೆಗಾರ, ಸಂಗೀತಗಾರ, ಕಮ್ಮಾರ, ನೇಕಾರ, ಅಕ್ಕಸಾಲಿಗ, ಅಡುಗೆ, ಮಕ್ಕಳ ಪಾಲನೆ ಇತ್ಯಾದಿ ಗ್ರಾಮೀಣ ಭಾರತದ ದೃಶ್ಯಲೋಕ ಅದು. ಸಾಮಾನ್ಯ ಜನರ ದೈನಂದಿನ ಶ್ರಮ, ಸೇವೆಗಳ ಬದುಕಿನೊಳಗೆ ಪ್ರವೇಶಿಸುವ ಬೆಳಕಿನ ಕಿಟಕಿಗಳಂತೆ ಈ ಭಿತ್ತಿಪತ್ರ ಫಲಕಗಳು ಕಂಡವು. ಅದಾದ ನಂತರ 'ಭಾರತರತ್ನ', 'ಪದ್ಮಶ್ರೀ' ಪ್ರಶಸ್ತಿ ಪದಕಗಳ ಲಾಂಛನವನ್ನು ವಿನ್ಯಾಸಗೊಳಿಸುವ ಹೊಣೆಯನ್ನು ನಂದಲಾಲರು ನಿರ್ವಹಿಸಿದರು.